ಕರ್ನಾಟಕ ವಿಧಾನ ಪರಿಷತ್ತು

142ನೇ ಅಧಿವೇಶನ -2020

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. | 178+208 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ) ಹಾಗೂ<br>ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) |
| ಉತ್ತರಿಸಬೇಕಾದ ದಿನಾಂಕ | 07.12.2020 |

| ಪ್ರಶ್ನೆ | | ಉತ್ತರ |
|---|---|---|
| ಅ | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಯಾವಾಗ ಸ್ಥಾಪನೆ ಮಾಡಲಾಗಿದೆ; ಇದರ ಉದ್ದೇಶಗಳೇನು; ಇದರ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ ಎಷ್ಟು; ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿ ಒದಗಿಸುವುದು | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು 2019ನೇ ಸಾಲಿನಲ್ಲಿ ಸ್ಥಾಪನೆ ಮಾಡಲಾಗಿದೆ.<br><br>ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಡಿಯ ಉನ್ನತ ಶಿಕ್ಷಣ ವಲಯದ ಮಹತ್ವಾಕಾಂಕ್ಷಿ ಹಾಗೂ ಸಮಗ್ರ ಯೋಜನೆಯಾದ ರಾಷ್ಟ್ರೀಯ ಉಚ್ಛತರ ಶಿಕ್ಷಾ ಅಭಿಯಾನದ(ರೂಸಾ) ಕಾರ್ಯಕ್ರಮದಡಿ ಸ್ಥಾಪಿಸಲಾಗಿರುವ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ಉನ್ನತ ಶಿಕ್ಷಣ ವಲಯದಲ್ಲಿ ಪರಾಕಾಷ್ಠೆಯನ್ನು ತಲುಪುವ ಹಾಗೂ ಕ್ರಿಯಾಶೀಲರಾಗುವ, ಪರಿಸ್ಥಿತಿಯ ಬೇಡಿಕೆಗಳನ್ನು ನಿಭಾಯಿಸುವ ಹಾಗೂ ಗುಣಮಟ್ಟ ಜಾಗೃತೆ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಸಾಮರ್ಥ್ಯತೆ ಮತ್ತು ಸಕ್ಷಮತೆಯನ್ನು ವೃದ್ಧಿಸುವ ಮಹಾತ್ವಕಾಂಕ್ಷೆ ಹಾಗೂ ಧ್ಯೇಯೋದ್ದೇಶಗಳನ್ನು ಹೊಂದಿರುತ್ತದೆ.<br>1) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, (2) ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು (3) ವಿಹೆಚ್.ಡಿ ಕೇಂದ್ರೀಯ ಮಹಿಳಾ ಗೃಹ ವಿಜ್ಞಾನ ಕಾಲೇಜುಗಳು |

--2

<table>
<tr>
<td></td>
<td></td>
<td>ಸಹಭಾಗಿ ಅಂಗ ಕಾಲೇಜುಗಳಾಗಿ ಏಕಾತ್ಮಕ ಸ್ವರೂಪದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುಪಡುತ್ತವೆ.<br>ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಡಿ ಅಧ್ಯಯನ ನಿರತರಾಗಿರುವ ವಿದ್ಯಾರ್ಥಿನಿಯರ ಸಂಖ್ಯೆಯ ವಿವರಗಳನ್ನು ಈ ಕೆಳಕಂಡಂತೆ ಸಾರಸಂಗ್ರಹಿಸಲಾಗಿದೆ
<table>
<tr><th>ಪದವಿ ಶಿಕ್ಷಣದ ಹಂತ</th><th>ವಿದ್ಯಾರ್ಥಿನಿಯರ ಸಂಖ್ಯೆ</th></tr>
<tr><td>ಸ್ನಾತ್ತಕ</td><td>3900</td></tr>
<tr><td>ಸ್ನಾತ್ತಕೋತ್ತರ</td><td>1000</td></tr>
<tr><td>ಒಟ್ಟು</td><td>4900</td></tr>
</table>
</td>
</tr>
<tr>
<td>ಆ</td>
<td>ಮಹಾರಾಣಿ ಕ್ಲಷ್ಟರ್ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ/ಸಂಚಿತ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ ಕಳೆದ 10 ತಿಂಗಳುಗಳ ಬಾಕಿ ವೇತನ ನೀಡದೆ ಏಕಾಏಕಿ ಅವುರುಗಳನ್ನು ತೆಗೆದು ಹಾಕಿರುವುದು ನಿಜವೇ; ಈ ಸಂಬಂಧ ಸರ್ಕಾರ ಈ ಹಿಂದೆ ಸದನದಲ್ಲಿ ವೇತನ ಪಾವತಿ ಮಾಡುವುದಾಗಿ ಭರವಸೆ ನೀಡಿರುವುದು ನಿಜವೇ;</td>
<td>ಪ್ರಥಮ ಕುಲಪತಿಯನ್ನು ನೇಮಿಸುವವರೆಗೆ, ಏಕಾತ್ಮಕ ಸ್ವರೂಪದ ಮಹಾರಾಣಿ ಕ್ಲಷ್ಟರ್ ವಿಶ್ವವಿದ್ಯಾಲಯದ ಸ್ಥಾಪನೆಗೆ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ನೇಮಿಸಲಾಗಿರುವ ವಿಶೇಷಾಧಿಕಾರಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2019(2019ರ ಕರ್ನಾಟಕ ಅಧಿನಿಯಮ ಸಂಖ್ಯೆ:15)ರ ಪ್ರಕರಣ 17ರಲ್ಲಿ ಉಪಬಂಧಿಸುವ ಮೇರೆಗೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಅನುಕ್ರಮವಾಗಿ ವಿಶ್ವವಿದ್ಯಾಲಯದ ಮತ್ತು ಕುಲಪತಿಗಳ ಅಂಥ ಅಧಿಕಾರಗಳನ್ನು ಚಲಾಯಿಸಬೇಕಾಗುತ್ತದೆ ಹಾಗೂ ಅಂಥ ಹಾಗೂ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆದರೆ ಸರ್ಕಾರವು ಈವರೆಗೂ ಅಂಥ ಅಧಿಕಾರಗಳನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಈ ಸನ್ನಿವೇಶದಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ ಹಾಗೂ ಸರ್ಕಾರದ ಗಮನಕ್ಕೆ ತಾರದೇ ಮತ್ತು ವೇತನ ಪಾವತಿಗೆ ಹಣಕಾಸಿನ ಅವಕಾಶ ಕಲ್ಪಿಸಿಕೊಳ್ಳದೇ ವಿಶೇಷಾಧಿಕಾರಿಗಳು ತಾತ್ಕಾಲಿಕ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಂಡಿರುತ್ತಾರೆ.</td>
</tr>
</table>

--3

| | | |
|---|---|---|
| | | ಮುಂದುವರೆದು, ಬೋಧಕೇತರ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುವುದಕ್ಕೆ ಸಂಬಂಧಿಸದಂತೆ ಯಾವುದೇ ಆದೇಶಗಳು ಹಾಗೂ ಹೊರ ಗುತ್ತಿಗೆ ಸಂಬಂಧಿ ದಾಖಲೆಗಳಾಗಲೀ ಮಹಾರಾಣಿ ಕ್ಲಷ್ಟರ್ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವುದಿಲ್ಲ.<br>ಖಾಯಂ ನೇಮಕಾತಿಗೆ ಅನ್ವಯವಾಗುವ ಕ್ರಮಪದ್ಧತಿ, ಮಿಸಲಾತಿ ನೀತಿ ಹಾಗೂ ಅರ್ಹತಾ ಷರತ್ತುಗಳನ್ನು ಅನ್ವಯಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ-55ರನ್ವಯ 1 ವರ್ಷದ ಅವಧಿಗೆ ಮೀರದಂತೆ ಮಾತ್ರ ಅರೆಕಾಲಿಕ ಅಥವಾ ಅತಿಥಿ ಬೋಧಕ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈ ವಿಧಾನ ತಾತ್ಕಾಲಿಕ ಬೋಧಕೇತರ ಹುದ್ದೆಗಳ ನೇಮಕಾತಿಗೂ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ, 1 ವರ್ಷದ ಅವಧಿಯು ಮುಕ್ತಾಯಗೊಂಡ ನಂತರ ಅತಿಥಿ ಉಪನ್ಯಾಸಕರನ್ನು ಬಿಡುಗಡೆಗೊಳಿಸಲಾಗಿದೆ. ಮುಂದುವರೆದು, ನೇಮಕಾತಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳ ಇರದ ಕಾರಣ ಹಲವು ಬೋಧಕೇತರ ಸಿಬ್ಬಂದಿಯನ್ನು ಬಿಡುಗಡೆಗೊಳಿಸಲಾಗಿದೆ.<br>ಬೋಧಕ/ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿಯಾಗದ ಬಗ್ಗೆ ಸರ್ಕಾರಕ್ಕೆ ಗಮನಕ್ಕೆ ಬಂದ ತಕ್ಷಣ, ಅವರ ವೇತನ ಪಾವತಿಯ ನಿಟ್ಟಿನಲ್ಲಿ ಉಪಕ್ರಮಿಸಲಾಗಿದೆ ಎಂದು ಮಾತ್ರ ಸದನದದಲ್ಲಿ ತಿಳಿಸಲಾಗಿತ್ತು. ತದನುಸಾರ, ಈ ಉದ್ದೇಶಕ್ಕಾಗಿ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |
| ಇ | ಸರ್ಕಾರ ತನ್ನ ಭರವಸೆಯಂತೆ ರೂ.54 ಲಕ್ಷಗಳನ್ನು ವೇತನಕ್ಕಾಗಿ ಬಿಡುಗಡೆ ಮಾಡಿದ್ದರೂ ಕೂಡಾ ಹೊಸದಾಗಿ ನೇಮಕಗೊಂಡ ಕುಲಪತಿಗಳು ಬಾಕಿ ವೇತನವನ್ನು ಪಾವತಿಸದೆ ಎಲ್ಲರನ್ನೂ ತೆಗೆದು ಹಾಕಿರುವುದು ನಿಜವೇ; | ವೇತನ ಪಾವತಿಗಾಗಿ ಅನುದಾನ ಒದಗಿಸುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಈವರೆವಿಗೂ ಅನುದಾನ ಬಿಡುಗಡೆಗೊಳಿಸಿರುವುದಿಲ್ಲ. ನೇಮಕಾತಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಇರದ ಹಾಗೂ 1 ವರ್ಷ ಗುತ್ತಿಗೆ ಅವಧಿಯನ್ನು ಪೂರೈಸಿದ ಸಿಬ್ಬಂದಿಯನ್ನು ಕುಲಪತಿಗಳು ನಿಯಮಾನುಸಾರ ತೆಗೆದು ಹಾಕಿರುತ್ತಾರೆ. |

--4

| | | |
|---|---|---|
| ಈ | ಸರ್ಕಾರವು ಯಾವ ಕಾಲಮಿತಿಯೊಳಗೆ ಇವರಿಗೆ ಬಾಕಿ ವೇತನ ಪಾವತಿಸುವುದರೊಂದಿಗೆ ಹಾಲಿ ಕೆಲಸ ನಿರ್ವಹಿಸುತ್ತಿರುವ ಹುದ್ದೆಯಲ್ಲಿಯೇ ಮುಂದುವರೆಸಲು ಆದೇಶ ಹೊರಡಿಸುವುದು? | ಕೋವಿಡ್-19 ಮಾರಕ ರೋಗದ ಪ್ರಸರಣೆಯಿಂದಾಗಿ ಎದುರಾಗಿರುವ ಆರ್ಥಿಕ ಸವಾಲುಗಳ ಹಿನ್ನೆಲೆಯಲ್ಲಿ ಬಾಕಿ ವೇತನ ಪಾವತಿಗೆ ಕಾಲಮಿತಿ ನಿಗದಿಪಡಿಸುವುದು ಕಷ್ಟಸಾಧ್ಯವಾಗುತ್ತದೆ. ಮುಂದುವರೆದು, ತಾತ್ಕಾಲಿಕ ನೇಮಕಾತಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರಲ್ಲಿ ಗೊತ್ತುಪಡಿಸಲಾಗಿರುವ ಅವಕಾಶಗಳನ್ವಯ ಕ್ರಮವಹಿಸಲಾಗುವುದು. |

ಇಡಿ/191/ಯುಬಿವಿ/2020

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)